MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 14-6-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮೇ ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು 33 ಶೇಕಡಾ ಇಳಿಕೆ

ಮೇ ತಿಂಗಳು 2022 ರಲ್ಲಿ ಭಾರತದ ಪಾಮೆಣ್ಣೆ ಆಮದು 33 ಶೇಕಡಾ ಇಳಿಕೆಯಾಗಿ 514022 ಟನ್‌ಗಳಾಗಿವೆಯೆನ್ನಲಾಗಿದೆ. ಮೇ ತಿಂಗಳ ಸಸ್ಯಜನ್ಯ ಖಾದ್ಯ ತೈಲ ಭಾರತದ ಆಮದು 769602 ಟನ್‌ಗಳಾಗಿವೆ. ಕಳೆದ ವರ್ಷದ ಮೇ ಯಲ್ಲಿ 1213142 ಟನ್ ಸಸ್ಯಜನ್ಯ ಆಮದಿಗಿಂತ ಈ ವರ್ಷ ಮೇ ನಲ್ಲಿ 1005547 ಟನ್‌ಗಳಿಗೆ ಇಳಿಕೆಯಾಗಿದೆ. ಕಚ್ಚಾ ಪಾಮೆಣ್ಣೆ ಆಮದು ಹಿಂದಿನ ವರ್ಷ ಮೇ ಯಲ್ಲಿದ್ದ 7.55 ಲಕ್ಷ ಟನ್‌ಗಳಿಂದ 4.09 ಲಕ್ಷ ಟನ್‌ಗಳಿಗೆ ಇಳಿಕೆಯಾಗಿದ್ದು, ರಿಫೈಂಡ್ ಪಾಮೆಣ್ಣೆ ಆಮದು 2075 ಟನ್‌ಗಳಿಂದ 1 ಲಕ್ಷ ಟನ್‌ಗಳಿಗೆ ತೀವ್ರ ಹೆಚ್ಚಳ ಕಂಡಿದೆ. ಸೋಯಾಬೀನ್ ಎಣ್ಣೆ ಆಮದು 2067 ಲಕ್ಷ ಟನ್‌ಗಳಿಂದ(ಹಿಂದಿನ ವರ್ಷ ಮೇ) ಈ ವರ್ಷ ಮೇಯಲ್ಲಿ 3.73 ಲಕ್ಷ ಟನ್‌ಗಳಿಗೆ ಹೆಚ್ಚಳ ಕಂಡಿದೆ. ಸೂರ್ಯಕಾಂತಿ ಎಣ್ಣೆ ಆಮದು 1.75 ಲಕ್ಷ ಟನ್‌ಗಳಿಂದ 1.18 ಲಕ್ಷ ಟನ್‌ಗಳಿಗೆ ಇಳಿಕೆಯಾಗಿದೆ.

## ಇಂಡೋನೇಶಿಯಾ ಪಾಮೆಣ್ಣೆ ರಫ್ತು ಕೋಟಾ ಹೆಚ್ಚಳ

ಇಂಡೋನೇಶಿಯಾದಿಂದ ಪಾಮೆಣ್ಣೆ ರಫ್ತು ಕೋಟಾ 2.25 ಮಿಲಿಯನ್ ಟನ್‌ಗಳಿಗೆ ಹೆಚ್ಚಳ ಹಾಗೂ ರಫ್ತು ಲೆವಿ $ 200 ಗಳಿಗೆ ಇಳಿಕೆ. ಸತತ 4 ದಿನಗಳ ಕುಸಿತ ಕಂಡು 10 ವಾರಗಳ ಕನಿಷ್ಠ ಮಟ್ಟಕ್ಕಿಳಿದಿದ್ದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 7 ರಿಂಗಿಟ್ಸ್‌ಗಳ ಹೆಚ್ಚಳವಾಗಿ 5800 ರಿಂಗಿಟ್ಸ್‌ಗಳಿಗೇರಿತು. ಇಂಡೋನೇಶಿಯಾ ಆಂತರಿಕ ಮಾರುಕಟ್ಟೆ ಪಾಮೆಣ್ಣೆ ಕೋಟಾ 2.25 ಮಿಲಿಯನ್ ಟನ್‌ಗಳಿಗೆ ಹೆಚ್ಚಳಗೊಳಿಸಲಾಗಿದೆಯೆನ್ನಲಾಗಿದೆ. ಕೋವಿಡ್‌ನಿಂದ ಚೀನಾದ ಕೆಲವು ಪಟ್ಟಣಗಳು ನಿರ್ಬಂಧಕ್ಕೊಳಗಾಗಿರುವುದರಿಂದ ಚೀನಾದ ಪಾಮೆಣ್ಣೆ ಆಮದು ಬೇಡಿಕೆ ಇಳಿಕೆಯಾಗಿದೆಯೆನ್ನಲಾಗಿದೆ.

## ಹರಿಯಾಣದಲ್ಲಿ ಜೋಳ ಬಂಪರ್ ರಾಬಿ ಬೆಳೆ

ಹರಿಯಾಣದಲ್ಲಿ ರಾಬಿ ಜೋಳ ಬೆಳೆಯ ಬಂಪರ್ ಕಟಾವಾಗಿದೆಯೆನ್ನಲಾಗಿದ್ದು, ಸರಕಾರ ಖರೀದಿ ಮಾಡದ ಹೊರತಾಗಿಯೂ ಖಾಸಗಿ ವರ್ತಕರು ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಿನ ದರ (ಕ್ವಿಂ. ಗೆ ರೂ.2000 ಕ್ಕಿಂತ ಮೇಲೆ) ಖರೀದಿ ಮಾಡುತ್ತಿದ್ದಾರೆನ್ನಲಾಗಿದೆ. ಈ ವರ್ಷ ಬೆಳೆ ಹಾಗೂ ದರ ಉತ್ತಮವಿದೆಯೆನ್ನಲಾಗಿದ್ದು ರೈತರ ಸಂತೋಷಕ್ಕೆ ಕಾರಣವಾಗಿದೆಯೆನ್ನಲಾಗಿದೆ.

## ಭಾರತದ ಜೋಳ ರಫ್ತು $ 816.31 ಗಳಿಗೇರಿಕೆ

ಭಾರತದ ಈ ವರ್ಷದ ಜೋಳ ರಫ್ತು ಜೋಳ ರಫ್ತು ಸರ್ವಕಾಲಿಕ ದಾಖಲೆ $ 816.31 ಕ್ಕೇರಿದೆಯೆನ್ನಲಾಗಿದೆ.

## USDA ಯ ಅಂದಾಜಿನಂತೆ 2022/23 ರ ಬ್ರೆಜಿಲ್‌ನ ಕಾಫಿ ಉತ್ಪಾದನೆ 11 ಶೇಕಡಾ ಹೆಚ್ಚಳ

USDA ಯ ಉತ್ಪಾದನಾ ಅಂದಾಜಿನಂತೆ ಬ್ರೆಜಿಲ್‌ನ 2022/23 ರ ಕಾಫಿ ಉತ್ಪಾದನೆ 11 ಶೇಕಡಾ ಹೆಚ್ಚಳವಾಗಿ 60ಕೆ.ಜಿ ಯ 64.3 ಮಿಲಿಯನ್ ಚೀಲಗಳಾಗಲಿವೆಯೆನ್ನಲಾಗಿದೆ. ಇದು ಏಜನ್ಸಿಗಳು ನಡೆಸಿದ ಸರ್ವೆಗಳಲ್ಲೇ ಅತಿ ಹೆಚ್ಚಿನ ಅಂದಾಜು ಉತ್ಪಾದನೆಯೆನ್ನಲಾಗಿದೆ. ಇದರಂತೆ ಬ್ರೆಜಿಲ್‌ನಲ್ಲಿ 41.5 ಮಿಲಿಯನ್ ಚೀಲ ಅರೆಬಿಕಾ ಕಾಫಿ ಉತ್ಪಾದನೆಯಾಗಲಿದೆ. ಇದು ಹಿಂದಿನ ವರ್ಷಕ್ಕಿಂತ 14 ಶೇಕಡಾ ಹೆಚ್ಚಳ, ಹಾಗೂ ರಾಬೆಸ್ಟಾ ಕಾಫಿ ಉತ್ಪಾದನೆ ದಾಖಲೆ 22.8 ಮಿಲಿಯನ್ ಚೀಲಗಳಿಗೇರಲಿದೆಯೆನ್ನಲಾಗಿದೆ. ಉತ್ತಮ ಹವಾಮಾನ ಹಾಗೂ ಉತ್ತಮ ನಿರ್ವಹಣೆಯಿಂದ ರಾಬೆಸ್ಟಾ ಕಾಫಿ ಉತ್ಪಾದನೆ ಹೆಚ್ಚಳವಾಗಲಿದೆಯೆನ್ನಲಾಗಿದೆ. ರಫ್ತು 3 ಶೇಕಡಾ ಹೆಚ್ಚಳದೊಂದಿಗೆ 39.05 ಮಿಲಿಯನ್ ಚೀಲಗಳಾಗಲಿದೆಯೆನ್ನಲಾಗಿದೆ. ಬ್ರೆಜಿಲ್‌ನ ಬಳಕೆ 22.45 ಮಿಲಿಯನ್ ಚೀಲಗಳೆನ್ನಲಾಗಿದೆ.